ಜಾತಿಯ ಕಾಡ ಹಣ್ಣುಗಳನ್ನು ತಿನ್ನುತ್ತ ಬೇಸಿಗೆಯಾದರೆ ಗಂಟಿಗಳಿಗೆ ನೀರು ಕುಡಿಸಲು ಹೊಳೆಗೆ ಹೊಡೆದುಕೊಂಡು ಹೋಗಿ ಅವುಗಳ ಜೊತೆಯೇ ಸ್ನಾನ ಮಾಡಿ ಅಪ್ಪಟ ಗೋಪಾಲಕರಾಗುತ್ತಿದ್ದೆವು! ಇನ್ನು ಮಳೆಗಾಲದ್ದು ಇನ್ನೊಂದೇ ಕತೆ. ಕಂಬಳಿ ಕೊಪ್ಪೆಯೊಳಗೆ ಅವಿತುಕೊಂಡು ಬರಿಗಾಲಲ್ಲೇ ಆ ಜಿರಾಪತಿ ಮಳೆಯಲ್ಲಿ ಅವುಗಳ ಹಿಂದೆ ಕಾಲಾಡುತ್ತಾ ಕುತ್ತಿಗೆಯಲ್ಲಿ ಲೊಳ ಲೊಳ ಲೊಟ್ಟ್ ಲೊಟ್ಟ್ ಶಬ್ದ ಮಾಡುವ ಮರೋಣಿ, ಭಾರವಾದ ಕುಂಟೆ ಇತ್ಯಾದಿಗಳಿದ್ದರೂ ಹೇಗೋ ಕಣ್ತಪ್ಪಿಸಿ ತನ್ನೊಡೆಯ ಅಥವಾ ಬೇರೆಯವರದು ಅಂತ ಭೇದವೆಣಿಸದೇ ಗದ್ದೆಗೆ ನುಗ್ಗುವ ಪುಂಡ ಗಂಟಿಗಳನ್ನು ಕಣ್ಣಲ್ಲಿ ಕಣ್ಣಿಟ್ಟು ಕಾಯಬೇಕಾಗುತಿತ್ತು. ಎಚ್ಚರ ತಪ್ಪಿದರೆ, ಫಸಲಿಗೆ ಬಾಯ್ಕೊಟ್ಟ ತಪ್ಪಿಗೆ ಆ ಮೂಕಜೀವಿಗಳು ಒಂದೋ ಬಾಸುಂಡೆ ಏಟು ತಿನ್ನಬೇಕು, ಇಲ್ಲ, ದೊಡ್ಡಿಗೆ ಅಟ್ಟಲ್ಪಟ್ಟು ಎರಡು ಮನೆಗಳ ನಡುವೆ ಮಾತಿಗೆ ಮಾತು ಬೆಳೆದು ವಿನಾಕಾರಣ ಪಂಜುರ್ಲಿಯನ್ನೋ ಕಲ್ಲುಕುಟ್ಟನನ್ನೋ ಅಥವಾ ಧರ್ಮಸ್ಥಳದ ಮಂಜುನಾಥನನ್ನೋ ಎಳೆದು ತಂದು ಆಣೆಭಾಷೆ ಹಾಕಿ ಸಂಬಂಧವನ್ನೇ ಕಡಿದುಕೊಳ್ಳುವ ಮೂಲ ಹೇತುವಾಗಬೇಕು!!

ಇನ್ನು ದೀಪಾವಳಿ ಬಂತೆಂದರೆ ಆ ಸಂಭ್ರಮವೇ ಬೇರೆ! ಸುಡುಮದ್ದಿನ ಭರಾಟೆಗಳಿಲ್ಲದಿದ್ದ ಆ ಕಾಲದಲ್ಲಿ ನಮಗೆಲ್ಲ ಹೆಚ್ಚು ರೈಸುತ್ತಿದ್ದುದು ಮೊದಲ ದಿನದ ನಸುಕಿನ ಎಣ್ಣೆಸ್ನಾನ ಅವಲಕ್ಕಿ ಮೊಸರೂ ಅಲ್ಲ; ಮರುದಿನದ ಕದ್ದಿಂಗಳಲ್ಲಿ ಗದ್ದೆಗೆ ಹೂ ತಿಂಡಿ ದೀಪವನಿಟ್ಟು ಬಲೀಂದ್ರನನ್ನು ಧರೆಗೆ ಕರೆಯುವ ಪರಿಯೂ ಅಲ್ಲ! ಬದಲಿಗೆ ಮೂರನೇ ದಿನದ ಗೋಪೂಜೆ! ಬೆಳಗ್ಗೆ ಬೇಗ ಎದ್ದು ಅಣ್ಣನ ಮುಂದಾಳ್ತನದಲ್ಲಿ ತಮ್ಮ ತಂಗಿಯರೊಂದಿಗೆ ಕಾಡು ಗುಡ್ಡವನ್ನೆಲ್ಲಾ ಜಾಲಾಡಿ ತಂದ ವಿಧವಿಧದ ಹೂಗಳು ಮತ್ತು ಮನೆಯಲ್ಲೇ ಬೆಳೆದ ಚೆಂಡುಹೂ ದಾಸವಾಳದ ಜೊತೆಗೆ ಹಣ್ಣಡಿಕೆಯನ್ನು ಪೆಂಡೆಂಟ್‌ನಂತೆ ಸೇರಿಸಿ ಸರ ಮಾಡಿ, ನಂತರ ಗಂಟಿಗಳನ್ನೆಲ್ಲ ಹೊಳೆಗೆ ಹೊಡೆದುಕೊಂಡು ಹೋಗಿ ಮೈಯುಜ್ಜಿ ಸ್ನಾನಮಾಡಿಸಿ ಪ್ರತಿಯೊಂದರ ಮೈಮೇಲೂ ಬಿಳಿ ಅರಿಸಿನ ಕೆಂಪು ವೃತ್ತಗಳನ್ನು ಲೋಟದ ಮೂಲಕ ಅಚ್ಚು ಹೊಡೆದು ಹೂಮಾಲೆಗಳ ಅಲಂಕಾರ ಮುಗಿಯಿತೆಂದರೆ ಪೂಜೆಗೆ ರೆಡಿ ಎಂದೇ ಅರ್ಥ. (ಬೆಳ್ತಿಗೆ ಅಕ್ಕಿ ನೆನೆಸಿ ನುಣ್ಣಗೇ ರುಬ್ಬಿ ಅದನ್ನು ಮೂರು ತಟ್ಟೆಗಳಲ್ಲಿ ಹರಡಿ ಎರಡು ತಟ್ಟೆಗೆ ಅರಿಸಿನ ಬೆರೆಸಿ ಅದರಲ್ಲೊಂದು ತಟ್ಟೆಗೆ ಸುಣ್ಣ ಬೆರೆಸಿದರೆ ಏಕ್ದಂ ಮೂರೂ ಬಣ್ಣ ಸಿದ್ಧವಾಗುವ ಬಗೆಯೇ ನಮಗೆಲ್ಲ ಸೋಜಿಗವೆನಿಸುತಿತ್ತು!) ಕರಾವಿನ ಹಸುವೊಂದನ್ನು (ಕೋಣ ಮತ್ತು ಎಮ್ಮೆಗಳಿಗೆ ಉಳಿದೆಲ್ಲ ಷೋಡಶೋಪಚಾರಗಳಿದ್ದರೂ ಪೂಜೆ ಮಾತ್ರ ಇಲ್ಲ!) ಮನೆಯ ಒಳ ಅಂಗಳಕ್ಕೆ ತಂದು ಮಂತ್ರ ಮಂಗಳಾರತಿ ಸಮೇತ ಅಪ್ಪಯ್ಯ ಪೂಜೆ ಮಾಡಿದರೆ, ಅಮ್ಮ ಅದಕ್ಕೆ ನೆನೆಸಿಟ್ಟ ಅಕ್ಕಿಯ ಜೊತೆಗೆ ಮುಳ್ಳುಸೌತೆ ಕಡುಬು ತಿನ್ನಿಸುತ್ತಿದ್ದಳು. ಗಂಟಿ ಮೇಯಿಸುವ ಹುಡುಗ ಹಟ್ಟಿಯಲ್ಲಿದ್ದ ಉಳಿದವಕ್ಕೆ ಹಂಡೆಯಲ್ಲಿರುವ ದಿನದ ಅಕ್ಕಚ್ಚಿನ ಜೊತೆಗೆ ಅಕ್ಕಿ ನುಚ್ಚು ಸೇರಿಸಿ ಮಾಡಿದ ಸ್ಪೆಷಲ್ ಗಂಜಿಯನ್ನು ಬಾನಿಗೆ ಸುರಿಯುತ್ತಿದ್ದರೇ ಆಹಾ! ಆ ವಾಚಾಮಗೋಚರ ಘಮಲು... ಈಗಲೀಗ ಅನುಭವಿಸಿದಂತಿದೆ!

ಇನ್ನು ಇವುಗಳ ಬಾಣಂತನದ ಸೊಗಸನ್ನು ಬರೆದಷ್ಟೂ ಕಡಿಮೆಯೆ! ಹಟ್ಟಿಯಲ್ಲಿ ಗಬ್ಬದ ದನ ಎಮ್ಮೆ ಇದ್ದರಂತೂ ಮನೆ ಯಜಮಾನ್ತಿ ರಾತ್ರಿಯೆಲ್ಲ ಎದ್ದು ಎದ್ದು ಚಿಮಣಿ ಬೆಳಕಲ್ಲಿ ಅದನ್ನು ಗಮನಿಸುತ್ತಿರಬೇಕು. ಅಕಸ್ಮಾತ್ ನೋಡದಿದ್ದರೆ ಕರು ಹಾಕಿದ ನಂತರ ತನ್ನ 'ಕಸ'ವನ್ನು ತಾನೇ ತಿಂದರೆ? ಹೀಗೆ ತಿನ್ನುವಾಗ ಗಂಟಲಿಗೆ 'ಕಸ' ಸಿಕ್ಕಿ ಮೂಕಪ್ರಾಣಿ ಪ್ರಾಣಾಪಾಯಕ್ಕೆ ತುತ್ತಾದರೆ?